ನಮ್ಮ ಜಿಲ್ಲೆ

ಭಾಷಣ ಸ್ಪರ್ಧೆ: ಕರ್ನಾಟಕ ವಿಶ್ವ ವಿದ್ಯಾನಿಲಯದ ಆಶ್ರಯದಲ್ಲಿ ಕಳೆದ ತಾ. 9ರಂದು ಧಾರವಾಡದಲ್ಲಿ ಜರಗಿದ ಆಶು ಭಾಷಣ ಸ್ಪರ್ಧೆಯಲ್ಲಿ ಉಡುಪಿಯ ಲಾ ಕೊಲೇಜಿನ ಶ್ರೀ| ಎಸ್. ವಿಲಿಯಂ ಪಿಂಟೋರವರು ದ್ವಿತೀಯ ಸ್ಥಾನ ಗಳಿಸಿರುವರೆಂದು ತಿಳಿಯಲಾಗಿದೆ. ಈ ಸ್ಪರ್ಧೆಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿದ 37 ಕೊಲೇಜುಗಳು ಭಾಗವಹಿಸಿದ್ದುವು. ಇದರ ಪೂರ್ವಭಾವಿಯಾಗಿ ಕುಮ್ಟಾದಲ್ಲಿ ಜರಗಿದ ಜೋನಲ್ ಸ್ಪರ್ಧೆಯಲ್ಲಿ ಶ್ರೀ| ಪಿಂಟೋರವರು ಪ್ರಥಮಸ್ಥಾನ ಗಳಿಸಿದ್ದರು.

ಕಾಪುದಲ್ಲಿ ತ್ರಿಕೋಣ ಸ್ಪರ್ಧೆ: ಮುಂಬರುವ ಸಾರ್ವತ್ರಿಕ ಮಹಾಚುನಾವಣೆಯಲ್ಲಿ ಕಾಪು ಮತದಾರ ಕ್ಷೇತ್ರದಲ್ಲಿ ತ್ರಿಮುಖ ಸ್ಪರ್ಧೆ ನಡೆಯುವ ಸಂಭವ ಕಂಡುಬಂದಿದೆ. ಶ್ರೀ| ಎಫ್. ಎಕ್ಸ್. ಡಿ. ಪಿಂಟೋ (ಕೊಂಗ್ರೆಸ್), ಮತ್ತು ಶ್ರೀ| ಬಿ. ಭಾಸ್ಕರ ಶೆಟ್ಟಿ (ಪಿ. ಎಸ್. ಪಿ.) ಯವರು ಸ್ಪರ್ಧಿಸುವುದು ಈಗಾಗಲೇ ನಿಶ್ಚಯವಾಗಿದ್ದು, ಇದೀಗ ಸ್ವತಂತ್ರ ಹುರಿಯಾಳು ಶ್ರೀ| ಎಂ. ಸಿ. ಫೆರ್ನಾಂಡಿಸರೂ ಸ್ಪರ್ಧಿಸುವರಾಗಿ ಕೇಳಬರುತ್ತದೆ.

ಭುವನೇಂದ್ರ ಸಿಂಡಿಕೇಟ್ ಪಂದ್ಯಾಟಗಳು: ಉಡುಪಿಯಲ್ಲಿ ಭುವನೇಂದ್ರ ಸಿಂಡಿಕೇಟ್ ಪಂದ್ಯಾಟಗಳು ಕಳೆದ ತಾ. 17ರಂದು ಆರಂಭವಾಗಿದ್ದು ತಾ. 31ರ ವರೆಗೆ ನಡೆಯಲಿವೆ. 14 ವಿವಿಧ ಪಂದ್ಯಾಟಗಳು ನಡೆಯುತ್ತಲಿದ್ದು, ಇವುಗಳಲ್ಲಿ ಭಾಗವಹಿಸಲು ಮೈಸೂರಿನ ಜಿಲ್ಲೆಗಳಿಂದಲೂ ಕಾಸರಗೋಡಿನಿಂದಲೂ ಟೀಮುಗಳು ಬಂದಿವೆಯಾಗಿ ತಿಳಿಯಲಾಗಿದೆ.

ಮಹಾಸಭೆ: ಮಂಗಳೂರು ಬಿ. ಇ. ಎಂ. ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ಮಹಾಸಭೆ ಮತ್ತು ವಿವಿಧ ಆಟೋಟ ಸ್ಪರ್ಧೆಗಳು ತಾ. 31ರಂದು ಶಾಲಾ ವಠಾರದಲ್ಲಿ ಜರಗಲಿವೆ.

ಕ್ರಿಕೆಟ್ ಕೆನರಾ ಕ್ರಿಕೆಟ್ ಎಸೋಸಿಯೇಶನಿನ ವತಿಯಿಂದ ನಡೆಯುವ ಫೋರ್ಡ್ ಕಪ್ ಪಂದ್ಯಾಟದ ಸೆಮಿಫೈನಲಿನಲ್ಲಿ ಹಿಂದ್ ಕ್ರಿಕೆಟ್ ಕ್ಲಬ್ಬನ್ನು ಪೆಂಟ್ಲೆಂಡ್ ಪೇಟೂ ಸ್ಪೋರ್ಟ್ಸ್ ಎಸೋಸಿಯೇಶನಿನವರು ಸೋಲಿಸಿ ಫೈನಲಿಗೆ ಅರ್ಹತೆ ಪಡೆದರು.

ಯೋಜನಾ ಪ್ರಚಾರ ಕಾರ್ಯಕ್ರಮ: ಪಂಚವಾರ್ಷಿಕ ಯೋಜನೆ ಮತ್ತು ಕುಟುಂಬ ನಿಯಂತ್ರಣ ಕಾರ್ಯಕ್ರಮದ ಪ್ರಚಾರಾರ್ಥ ಮಂಗಳೂರು ಸರಕಾರೀ ಕೊಲೇಜಿನಲ್ಲಿ ಜಂಟಿ ಕಾರ್ಯಕ್ರಮವು ಕಳೆದ ತಾ. 18ರಂದು ಸಂಜೆ ಮೈಸೂರು ಕಾರ್ಮಿಕ ಮಂತ್ರಿ ಶ್ರೀ| ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಆರಂಭದಲ್ಲಿ ಜಿಲ್ಲಾ ಡಿಪ್ಯೂಟಿ ಕಮಿಷನರ್ ಶ್ರೀ| ಸಿ. ಜೆ. ಪದ್ಮನಾಭನವರು ಸ್ವಾಗತಭಾಷಣಮಾಡಿದರು. ಜಿಲ್ಲಾ ಸರ್ಜನ್ ಡಾ| ಟಿ. ಪ್ರಸನ್ನಸಿಂಹರಾಯರು ಮತ್ತು ಜಿಲ್ಲಾ ಆರೋಗ್ಯಾಧಿಕಾರಿ ಡಾ| ಎಚ್. ಎಸ್. ನಾಯಕರವರು ಕುಟುಂಬ ಯೋಜನೆಯ ಕುರಿತೂ, ಶ್ರೀ| ವಿ. ಎಸ್ ಕುಡ್ವರು ಕೈಗಾರಿಕಾ ಪ್ರಗತಿಯ ಕುರಿತಾಗಿಯೂ, ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ವಿದ್ಯಾಕ್ಷೇತ್ರದ ಕಾರ್ಯಕ್ರಮದ ವಿಷಯದ ಮೇಲೂ, ಶ್ರೀ| ಟಿ. ಎ. ಪೈಯವರು ಸಮಗ್ರ ಯೋಜನೆಯ ವಿಮರ್ಶೆಯ ಕುರಿತೂ ಭಾಷಣಮಾಡಿದರು. ಕೊನೆಯಲ್ಲಿ ಯೋಜನಾ ಪ್ರಚಾರಾಧಿಕಾರಿ ಶ್ರೀ| ಎನ್. ಎಸ್. ವೆಂಕೋಬರಾಯರು ಧನ್ಯವಾದಗಳನ್ನರ್ಪಿಸಿದರು. ಅನಂತರ ಒಂದು ಪ್ರದರ್ಶನ ಮತ್ತು ವಿನೋದಾವಳಿಗಳ ಕಾರ್ಯಕ್ರಮವಿತ್ತು.

ಅಧಿಕಾರದಲ್ಲಿ ಭಡ್ತಿ: ಬಂಟ್ವಾಳ-ಮೂಡಬಿದ್ರೆ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ| ರಾಮಯ್ಯ ರೈ ಇವರು ಡಿ. ವೈ. ಎಸ್. ಪಿ ಆಗಿ ಭಡ್ತಿಗೊಂಡು, ವಿಶೇಷ ಕಾರ್ಯದ ಮೇಲೆ ಕಳೆದ ತಾ. 18ರಂದು ಬೆಳಗಾವಿಗೆ ತೆರಳಿರುವರೆಂದು ಗೊತ್ತಾಗಿದೆ.

ಮುಂಬಾಯಿಗೆ ಮಂಗಳೂರಿನ ಫೂಟ್‌ಬೊಲ್ ಟೀಮು: ಮುಂಬಾಯಿಯಲ್ಲಿ ನಡೆಯಲಿರುವ ರೋವರ್ಸ್ ಕಪ್ ಪಂದ್ಯದಲ್ಲಿ ಭಾಗವಹಿಸಲು ಮಂಗಳೂರಿನಿಂದ 15 ಮಂದಿ ಆಟಗಾರರನ್ನೊಳಗೊಂಡ ಫುಟ್‌ಬೊಲ್ ದಳವು ಮೆನೇಜರ್ ಶ್ರೀ| ನರೇಂದ್ರ ಮೆಂಡನರ ನೇತೃತ್ವದಲ್ಲಿ ಕಳೆದ ತಾ. 17ರಂದು ಮುಂಬಯಿಗೆ ತೆರಳಿದೆ.

ಜಾನುವಾರು ಸಂತೆ: ಕಾರ್ಕಳದ ಬಳಿ ಸೀತಾನದಿಯಲ್ಲಿ ಜಾನುವಾರು ಸಂತೆಯು ಕಳೆದ ತಾ. 18ರಂದು ಆರಂಭವಾಗಿದ್ದು, ಜನವರಿ ತಾ. 1ರ ತನಕ ನಡೆಯುವುದು.

ಉದ್ಘಾಟನೆ: ಮೈಸೂರು ಸರಕಾರದ ಕಾರ್ಮಿಕ ಮತ್ತು ಕಾನೂನು ಮಂತ್ರಿ ಶ್ರೀ| ಬಿ. ವೈಕುಂಠ ಬಾಳಿಗರವರು, ಕಳೆದ ರವಿವಾರ (ತಾ. 17) ಕುಂದಾಪುರದಲ್ಲಿ ಒಂದು ಹೊಸ ಖಾನಾವಳಿಯ ಉದ್ಘಾಟನೆ ನೆರವೇರಿಸಿದರು.

ಹಿಂದಿ ಸಮಿತಿಗೆ ನೇಮಕ: ಮೈಸೂರು ಸರಕಾರದವರು ನಿರೂಪಿಸಿದ ಹಿಂದಿ ಸಲಹಾಸಮಿತಿಯಲ್ಲಿ ಕುಂದಾಪುರದ ಅಧ್ಯಾಪಕ ಶ್ರೀ| ವಿ. ವಿ. ಕಾರಂತರೂ ಸುಳ್ಯದ ಹಿಂದಿ ಪಂಡಿತ ಶ್ರೀ| ಎಸ್. ಸುಬ್ಬಯ್ಯ ನಾಯ್ಕ, ಎಂ. ಎಲ್. ಎ. ಇವರು ಸದಸ್ಯರಾಗಿ ನೇಮಕಹೊಂದಿರುವರು.

ರೈತ ಮೇಳ ಮುಂದೆ ಬಿತ್ತು: ದಶಂಬರ ತಿಂಗಳಲ್ಲಿ ಜರಗುವುದೆಂದು ಈ ಮೊದಲು ಜ್ಞಾಹೀರಾದ ಮೈಸೂರು ರಾಜ್ಯ ಯುವಕ ರೈತ ಮೇಳವು ಜನವರಿ ತಿಂಗಳ 2ನೇ ವಾರಕ್ಕೆ ಮುಂದುವರಿಸಲಾಗಿದೆಯೆಂದು ದ. ಕ. ಜಿಲ್ಲಾ ಯುವಕ ಸಂಘದ ಸಂಘಟಕರು ಪ್ರಕಟಿಸಿರುವರು.

ಸ್ಕೌಟುದಳದ ಆರಂಭ: ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮೀ ದೇವಳ ಹಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಮಂಜುನಾಥಸ್ವಾಮೀ ಸ್ಕೌಟು ದಳದ ಉದ್ಘಾಟನೆಯು ಇತ್ತೀಚೆಗೆ ಜಿಲ್ಲಾ ಸ್ಕೌಟು ಕಮೀಶನರ್ ಶ್ರೀ| ವಿಠ್ಠಲ ಕಾಮತರಿಂದ ನಡೆಯಿತು. ಬೆಳ್ತಂಗಡಿ ತಾಲೂಕು ಬೋರ್ಡು ಸದಸ್ಯ ಶ್ರೀ| ಸೂರ್ಯನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು.

ಹೊರಟುಹೋದಳು. ತಾಯಿ ಸೀತು ಬಾಲೆಯನ್ನು ಸಿಂಗರಿಸಿ ಅವಳನ್ನು ಬಂದುಕೊಂಡಂತಹ ನೆಂಟರ ಸನ್ಮುಖಕ್ಕೆ ಕರತಂದಳು. ಹೆಣ್ಣನ್ನು ನೋಡಿ ನೆಂಟರು ಖುಷಿಬೀರಿದರು. ಸಪ್ತಕಾಡ್ಯರು, ನಾಲ್ಕುಮಂದಿ ಸಮಾಜದ ಪ್ರಮುಖರು ಹಾಗೂ ನೆಂಟರು ಎಲ್ಲರೂ ಇದ್ದು ನೆಂಟಸ್ತಿಕೆ ನಿಜಮಾಡಿದರು.

ಶುಭಲಗ್ನ ಸುಮುಹೂರ್ತದಲ್ಲಿ ಸೀತು ಬಾಲೆಯ ವಿವಾಹವು ತರುಣ ಉಮ್ಮಣನೊಂದಿಗೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. [ಸಶೇಷ]

ಕೋಡಿಕೊಂತಲಂದ ಬೀಡಿನಲ್ಲಿ ಚೇಂಪು ಬೈದ್ಯೆದಿ ಇದ್ದಳು. ಅವಳ ಗಂಡನು ಕಾಲವಾಗಿದ್ದನು. ಅವಳಿಗೆ ಏಳು ಮಂದಿ ಪುತ್ರರಿದ್ದರು. ಅವರನ್ನು ಸಪ್ತಕಾಡ್ಯರೆಂದು ಕರೆಯುತ್ತಿದ್ದರು. ತಾಯಿ ಮಕ್ಕಳು ಬೀಡಿನಲ್ಲಿ ಜೀವನ ಮಾಡುತ್ತಿದ್ದರು.

ಒಂದು ದಿನ ಹಿರಿಯ ಮಗನಾದ ಕಾಡ್ಯನು ಕುತೂಹಲಾತುರ ತಾಳ್ದು ತಾಯಿಯಾದ ಚೇಂಪು ಬೈದ್ಯೆದಿಯೊಡನೆ ಈ ರೀತಿ ವಿಚಾರಿಸಿದನು:

"ತಾಯಿ! ನಮಗೆ ತಂಗಿ ಇಲ್ಲವೇ? ನೀವು ಹೆಣ್ಣು ಹಡೆಯಲಿಲ್ಲವೇ?"

"ಇಲ್ಲ, ಮಗನೇ. ನಾನು ಹೆಣ್ಣು ಮಗುವನ್ನು ಹಡೆಯಲಿಲ್ಲ ನಿಮಗೆ ಒಬ್ಬಳು ತಂಗಿಯನ್ನು ಕೊಡದ ನಾನು ದುರ್ಭಾಗ್ಯೆ. ನಿಮ್ಮನ್ನು— ಏಳು ಮಂದಿ ಗಂಡುಮಕ್ಕಳನ್ನು— ಮಾತ್ರ ಹೊತ್ತು ಹೆತ್ತೆನು."

"ನೀವು ಇನ್ನು ಮೇಲೆಯಾದರೂ ಹೆಣ್ಣು ಮಗುವನ್ನು ಹೆರಲಾರಿರಾ?"

"ಥೂ! ಎಂತಹ ಬುದ್ಧಿಯಿಲ್ಲದ ಮಾತು ನಿನ್ನದು, ಮಗಾ! ನಿನ್ನ ಹಾಸ್ಯವೇ? ಗಂಡ ಸತ್ತು ಹೋಗಿದ್ದಾನೆ. ಯೌವನವು ಬಾಡಿಯುದೆ. ವಸಂತವು ಕಳೆದ ನಂತರ ಚಿಗುರೆಲೆ ಹುಟ್ಟುವುದೇ? ಅರ್ಧವದ ತೋರಿ ಬತ್ತಿದ ನನ್ನಲ್ಲಿ ತಾರುಣ್ಯದ ಗತಿ ಎಲ್ಲಿ, ಮಗನೇ? ಏನು ಹುಚ್ಚು ಮಾತಾಡುವೆ, ನೀನು?"

"ಹಾಗಾದರೆ ನೀವು ಹೆಣ್ಣು ಮಗುವನ್ನು ಹೆರಲಾರಿರಿ, ಅಲ್ಲವೇ?"

"ಮಗನೇ, ನಿನಗೆ ತಂಗಿಯ ಆಸೆ! ಆದರೆ, ದೇವರು ಕೊಡಬೇಕಲ್ಲವೇ?"

"ತಾಯಿ! ನಮ್ಮ ನಾಗನೆಲ್ಲಿ? ಬಿರ್ಮ (ಬ್ರಹ್ಮ)ನೆಲ್ಲಿ? ನಮ್ಮ ಕುಲದ ಸ್ಥಾನ-ಮೂಲ ಎಲ್ಲಿ ಎಂಬುದನ್ನು ತಿಳಿಸುವಿರಾ?"

"ನಾನು ಕಣ್ಣು ಹರಿಸಿ ಕಂಡಿಲ್ಲ. ಕಾಲು ಕೊಂಡುಹೋಗಿ ಕಾಣಲಿಲ್ಲ. ಕೇಳಾ ಕೇಳಿಯಾಗಿ ತಿಳಿದಿದ್ದೇನೆಯಷ್ಟೇ. ಕೊಂಬೆಟ್ಟುಸ್ಥಾನ, ಕೋಜಪೆಟ್ಟು ಎಂಬುದು ಮೂಲವಂತೆ. ಈ ಕ್ಷೇತ್ರವು ಹಾಳು ಬಿದ್ದಿದೆಯಂತೆ. ಅದರಲ್ಲಿ ತುಂಬೆ-ನೆಕ್ಕಿ, ಸೀಗೆ-ಸೊಪ್ಪೆ. ಬಳ್ಳಿ-ಪೊದೆಗಳು ಹರಡಿ ಕಾಡು ಬೆಳೆದಿದೆಯಂತೆ"

"ಅದನ್ನು ಜೀರ್ಣೋದ್ಧಾರ ಮಾಡಿದರೆ ನಮ್ಮ ಕುಲದೈವನಾದ ನಾಗಬಿರ್ಮನು ದಯೆದೋರುವನೇ? ನೀವು ಗರ್ಭವತಿಯಾಗಬಹುದೇ?"

"ಏನೋ, ಮಗಾ! ನನಗೊಂದೂ ಅರಿಯದು. ಏಳು ಹೋಗಿ ಎಪ್ಪತ್ತು ಶಕವಾಯಿತು ನನಗೆ. ಹೂಂ! ನಾನು ಹೇಗೆ ಬಸುರಿಯಾದೇನೋ! ಹೇಗೆ ಹಡೆದೇನೋ!"

"ಆ ಕ್ಷೇತ್ರವನ್ನು ಜೀರ್ಣೋದ್ಧಾರ ಮಾಡಿದರೆ ನೀವು ಹೆಣ್ಣು ಹೆರುವಿರಿ. ತಾಯಿ, ನಮಗೆ ತಂಗಿಯಾಗಬೇಕು. ನಮಗೆ ಮುದ್ದಾಡಲು ತಂಗಿಯೊಬ್ಬಳು ಹುಟ್ಟಬೇಕು. ನಂಬಿದವರಿಗೆ ಇಂಬುಂಟೆಂದು ಬಲ್ಲವರು ನುಡಿಯುತ್ತಾರೆ. ಬಿರ್ಮನು ಕೊಟ್ಟೇ ಕೊಡುವನು. ಇದೋ! ನಾವು ಏಳುಮಂದಿ ಸೋದರರು ನಾಗಬಿರ್ಮ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಳ್ಳುವೆವು! ನನ್ನದು ಯಥಾರ್ಥ ನುಡಿ! ನಾಗ

ಧೀರ ಸಪ್ತಕಾಡ್ಯರು

ಬಿರ್ಮನು ನಮಗೆ ತಂಗಿಯನ್ನು ಕೊಡಬೇಕು! ಅವನ ಆಶೀರ್ವಾದ ನಮ್ಮ ತಲೆಯ ಮೇಲೆ ಬೆಳಗಲಿ!"

ಆ ದಿನ ಕಳೆಯಿತು. ಮರುದಿನ ಕಾಡ್ಯ ಸೋದರರಾದ ಏಳು ಮಂದಿಯೂ ನಸುಕಿಗೇ ಎದ್ದರು. ಹಾಗೆ— ಗುದ್ದಲಿ, ಕತ್ತಿ—ಕಡಗೋಲು, ಬುಟ್ಟಿ— ಹೆಡಗೆಯಾದಿ ಉಪಕರಣಗಳನ್ನೂ ಹೊತ್ತುಕೊಂಡರು. ಕೆಲವೇ ಗಾವುದ ದೂರದಲ್ಲಿ ತಮ್ಮ ಕುಲದೈವಗಳ ಮೂಲಸ್ಥಳವಿರುತ್ತದೆಂಬುದನು ಮುನ್ನಾದಿನವೇ ಕಾಡ್ಯರು ಊರಿನ ಹಿರಿಯರಿಂದ ಸಂಗ್ರಹಿಸಿಕೊಂಡಿದ್ದರು. ದೈವ ದೇವರುಗಳನ್ನು ಪ್ರಾರ್ಥಿಸಿ, ತಾಯಿಯ ಚರಣಕ್ಕೆ ನಮಿಸಿ ಸಪ್ತಕಾಡ್ಯರು ಹೊರಟರು. ಪಾಳುಬಿದ್ದು ಕಾಡು ಬೆಳೆದಂತಹ ಆ ಸ್ಥಳಕ್ಕೆ ತಲಪಿದರು.

ತುಂಬೆ— ನೆಕ್ಕಿ ಗಿಡಗಳನ್ನು ಕೈಯಾರೆ ಕೀಳಿದರು. ಸೀಗೆ— ಪೊದರು— ಬಳ್ಳಿಗಳನ್ನು ಕಡಿದರು. ಕೆಲಸಕ್ಕೆ ನೂರಾರು ಆಳುಗಳನ್ನು ನೇಮಿಸಿದರು. ಕೆಲಸ ಭರದಿಂದ ಸಾಗಿತು. ನಾಗಬಿರ್ಮನಿಗೆ ಗುಂಡ ನಿರ್ಮಿಸಿದರು. ಭೂತಕ್ಕೆ ಸ್ಥಾನ ಕಟ್ಟಿದರು. ನಾಗಬಿರ್ಮನ ಪ್ರತಿಷ್ಠೆ ಮತ್ತು ಪೂಜೋತ್ಸವವನ್ನು ಜರಗಿಸಿದರು. ಭೂತಗಳಿಗೆ ರಾಗಭೋಗಗಳನ್ನು ಕೊಟ್ಟರು ಭಕ್ತಿಭಾವದಿಂದ ಸೆರಗೊಡ್ಡಿ ಪ್ರಾರ್ಥಿಸಿದರು.

"ನಾಗಬಿರ್ಮಾ! ಭೂತಗಣಾದಿಗಳೇ! ನಮಗೊಬ್ಬಳು ತಂಗಿ ಬೇಕು. ನಮ್ಮ ಹೆಬ್ಬಯಕೆಯದು! ನಮ್ಮ ಬೆನ್ನಿನ ದೂಳು ಝಾಡಿಸಲಿಕ್ಕೆ ನಮಗೊಬ್ಬಳು ತಂಗಿಯನ್ನು ಕರುಣಿಸಿರಿ! ಸ್ವಾಮಿ, ನಮ್ಮನ್ನು ಉದ್ಧರಿಸಿರಿ."

ನತಮಸ್ತಕರಾಗಿ ದೈವದೇವರುಗಳಿಗೆ ಪ್ರದಕ್ಷಿಣೆ ತೆಗೆದರು.

ಸಕಲ ಕಾರ್ಯವನ್ನು ತೀರಿಸಿ ಕಾಡ್ಯ ಸೋದರರು ತಮ್ಮ ಕೋಡಿಕೊಂತಲಂದದ ಬೀಡಿಗೆ ಮರಳಿದರು.

ಅವರ ಪ್ರಾರ್ಥನೆಯು ಈಡೇರದಿರಲಿಲ್ಲ. ತನ್ನ ಮಕ್ಕಳು ಮನೆಗೆ ಮರಳಿದ ದಿನದಂದೇ ಚೇಂಪು ಬೈದ್ಯೆದಿಗೆ ರಜೋದರ್ಶನವಾಯಿತು.

ರಜೋದರ್ಶನವಾದ ಚತುರ್ಥಿ ದಿನದಲ್ಲಿ ಮಿಂದುಬಂದಳು. ಆಗ ಅತ್ಯಂತ ಸುಗಂಧಪೂರಿತವಾದ ಮಂದಮಾರುತವು ಬೀಸುತ್ತ ಇವಳನ್ನು ಸ್ಪರ್ಶಿಸಿತು. ಒಡನೇ ಬೈದ್ಯೆದಿ ಹರ್ಷಪುಳಕಿತಳಾದಳು. ತಾನು ಗರ್ಭವತಿ ಎಂಬ ಭಾವನೆ ಮನದಲ್ಲಿ ಮೊಳೆದೋರಿತು.

ಐದನೇ ದಿನದಲ್ಲಿ ತನ್ನ ಶರೀರಪ್ರಕೃತಿಯಲ್ಲಿ ನವ ನೂತನವಾದೊಂದು ಅವಸ್ಥಾಂತರವು ಮೂಡಿಕೊಂಡುದನ್ನು ಕಂಡುಕೊಂಡು ಚೇಂಪು ಬೈದ್ಯೆದಿಯು ಆಶ್ಚರ್ಯಾನ್ವಿತಳಾಗಿ ಈ ರೀತಿ ತನ್ನಲ್ಲಿ ಅಂದುಕೊಂಡಳು.

"ಒಣಗಿದ ವೃಕ್ಷವು ಪುಷ್ಪಭರಿತವಾದಂತೇ ನನ್ನ ಪರಿಸ್ಥಿತಿಯಾಯಿತಲ್ಲ! ಮಾಯೆಯ ಮಹಿಮೆ ಅದ್ಭುತವಾದದ್ದು!"

ದಿನಗಳು ಕ್ರಮಿಸಿದ ಹಾಗೇ ಬೈದ್ಯೆದಿಯ ಸುಕ್ಕಡರಿದ ಶರೀರವು ರಕ್ತಮಾಂಸಗಳಿಂದ ತುಂಬಿ ತಾರುಣ್ಯದ ಹೊಂಬೆಳಕನ್ನು ಸೂಸತೊಡಗಿತು. ಕಳೆಗುಂದಿದ ಕಣ್ಣಿನ ಕಾಂತಿಯು ಪ್ರಜ್ವಲಿಸಿತು. ನಸುಬಾಗಿದ ಬೆನ್ನು ಚೇತರಿಸಿ ನಿಂತಿತು. ಕೇಶಜಾಲಗಳ ಬಿಳುಪುವರ್ಣವು ಮಾಯವಾಗಿ ಹೋಗಿ, ಅಲ್ಲಿ ತುಂಬಿಗಳ ಕರಿವರ್ಣದ ಮೆರುಗು ಪಸರಿಸಿಕೊಂಡಿತು.

"ಹುಚ್ಚು ಪುಷ್ಪಗಳು ಮುಡಿಯನ್ನೇರುವವೇ? ಎಲ್ಲವೂ ಬಿರ್ಮನಿಗೆ ಗೊತ್ತು ……..ನಾಗ ಬಿರ್ಮಾ! ನಿನಗೆ ಸಹಸ್ರ ವಂದನೆಗಳು!"

— ಹೀಗೆಂದು ಅಕ್ಕೆ, ತನ್ನ ಅಂಗಾಂಗಗಳಲ್ಲಿ ತುಳುಕುತ್ತಿರುವ ಯೌವನದ ಆವಿರ್ಭಾವವನ್ನು ನಿಟ್ಟಿಸಿ ಉದ್ಗರಿಸಿದಳು.

ತರುಣಿಯಂತಲ್ಲವಾದರೂ ಪ್ರೌಢಿಯಂತೆ ಕಾಣುವ ತಮ್ಮ ತಾಯಿಯನ್ನು ನೋಡಿ ಮಕ್ಕಳಾದ ಸಪ್ತಕಾಡ್ಯರು ಆನಂದಪರವಶರಾದರು. ಮನಸ್ಸಿನಲ್ಲೇ ತಮ್ಮ ಮೂಲ ದೈವಗಳಿಗೆ ಕೈಮುಗಿದರು.

ಹೀಗೆ ಐದಾರು ಮಾಸಗಳು ದಾಟಿದವು. ಆಗ ಚೇಂಪು ಬೈದ್ಯೆದಿ ತನ್ನ ಮಕ್ಕಳನ್ನು ಕರೆದು ಹೀಗೆಂದಳು:

"ಮಕ್ಕಳೇ, ನನಗೆ ಗರ್ಭವು ಭಾಸವಾಗಿದೆ. ನಿಮ್ಮ ಇಚ್ಛೆಯನ್ನು ಕುಲದೇವರು ಪೂರ್ತಿಸುವಂತಿದೆ."

"ನಾವು ಧನ್ಯರಾದೆವು, ತಾಯಿ!"

ಬಳಿಕ ಕಾಡ್ಯಸೋದರರೆಲ್ಲರೂ ಒತ್ತಟ್ಟಿಗೆ ಸೇರಿ ತಮ್ಮೊಳಗೆ ಈ ಪರಿಯಾಗಿ ಸಮಾಲೋಚಿಸಿದರು,

"ನಮ್ಮ ತಾಯಿ ಗರ್ಭಿಣಿ! ಅವರಿಗೆ ಬಯಕೆಯ ಊಟವನ್ನು ಹಾಕಬೇಕಲ್ಲವೇ! ನಮ್ಮ ಬಂಧುವರ್ಗದವರನ್ನು ಮತ್ತು ನೆರೆಹೊರೆಯವರನ್ನು ಕರೆದು ನಮ್ಮ ತಾಯಿಗೆ ಒಂದು ಸಮ್ಮಾನದೂಟವನ್ನು ಹಾಕುವಾ."

ಹಾಗೇ ತಾಯಿಗೆ ಸಮ್ಮಾನದೂಟವನ್ನು ಕೊಟ್ಟರು.

ಚೇಂಪು ಬೈದ್ಯೆದಿಗೆ ನವಮಾಸ ತುಂಬಿತು. ಉತ್ತಮ ಮುಹೂರ್ತದಲ್ಲಿ ಅವಳು ಹೆಣ್ಣು ಶಿಶುವೊಂದಕ್ಕೆ ಜನನವಿತ್ತಳು. ಕಾಡ್ಯಸೋದರರ ಸಂತೋಷವನ್ನು ಬಣ್ಣಿಸಲಾಸವಲ್ಲ. ಬಾಣಂತಿಯ ಆರೈಕೆಯನ್ನು ನಿರ್ವಹಿಸುವುದಕ್ಕೆ ಪರಿಚಾರಿಕೆಯರನ್ನು ನೇಮಿಸಿದರು.

ಹದಿಮೂರನೇ ದಿವಸ ಸಮೀಪದ ಬಂಧುವರ್ಗಗಳು ಬಂದು ತೊಟ್ಟಿಲು ತೂಗುವ ಸಂಸ್ಕಾರವನ್ನು ಮಾಡಿದರು, ಅಯೋನಿಜಳಾದ ಸೀತಾದೇವಿಯು ಹುಟ್ಟಿದಂತೇ ದೇವಮಾಯೆಯಿಂದ ಜನಿಸಿದ ಈ ಹೆಣ್ಣು ಶಿಶುವಿಗೆ "ಬಾಲೆಕೊಂಡಾಟದ ಸೀತು" (ಪ್ರೀತಿಯ ಸೀತು ಬಾಲೆ) ಎಂಬುದಾಗಿ ಸೋದರರು ನಾಮಕರಣವನ್ನು ಮಾಡಿದರು.

o o o o

ಮಗು ದಿನದಿಂದ ದಿನಕ್ಕೆ ಪ್ರವರ್ಧಮಾನವಾಗಿ ಬಳೆಯಿತು. ಸೀತು ಬಾಲೆಗೆ ಏಳು ವರುಷ ತುಂಬಿತು. ಸಪ್ತಮಿಯ ಚಂದ್ರನಂತೆ ಬಳೆದು ಸಪ್ತವರ್ಷ ಪ್ರಾಯಳಾದ ಸೀತು ಬಾಲೆ ಅಣ್ಣಂದಿಯರ, ತಾಯಿಯ ಮತ್ತು ನೆರೆಕರೆಯವರ ಕಣ್ಣಿಗೆ ಮುದ್ದಾಗಿ ಕಂಗೊಳಿಸಿದಳು.

ಒಂದು ದಿನ ಸೀತು ಬಾಲೆ ತೋಟದಲ್ಲಿ ತನ್ನ ಸಮವಯಸ್ಕಳಾದ ಎಂಕಮು ಎಂಬ ಬಂಟತಿ ಹುಡುಗಿಯೊಂದಿಗೆ ಆಟವಾಡುತ್ತಿದ್ದಳು. ಆ ವೇಳೆಯಲ್ಲಿ ಪಂಚಲಡಿ ಬರ್ಕೆಯಿಂದ ಉಮ್ಮಣನೆಂಬ ಹುಡುಗನಿಗೆ ವಧು ಹುಡುಕಿಕೊಂಡು ನೆಂಟರು ಕೋಡಿ ಕೊಂತಲಂದದ ಬೀಡಿಗೆ ಆಗಮಿಸಿದರು.

ಬಂದುಕೊಂಡಂತಹ ನೆಂಟರಿಗೆ ಸಪ್ತಸೋದರರು ಆದರಾತಿಥ್ಯಗಳನ್ನು ಮಾಡಿದರು.

ಹುಡುಗಿಯರಾದ ಸೀತುಬಾಲೆ ಮತ್ತು ಎಂಕಮು ಆಡುವೆಡೆಗೆ ಚೇಂಪುಬೈದ್ಯೆದಿ ನಡೆದು, ಅಲ್ಲಿ ಎಂಕಮುವನ್ನುದ್ದೇಶಿಸಿ ಹೀಗೆ ನುಡಿದಳು:

"ಸೀತುವಿನ ನೆಂಟಸ್ತಿಕೆ ಮಾತಿಗೆ ಬಂದಿದ್ದಾರೆ, ಮಗಳೇ. ಬಾ, ಕೊಂಚ ಕಳ್ಳು ಕುಡಿ. ತರುವಾಯ ನೀನು ಮನೆಗೆ ಹೋಗುವಿಯಂತೆ."

ಇಬ್ಬರು ಹುಡುಗಿಯರನ್ನೂ ಮನೆಗೆ ಕರೆದೊಯ್ದು ಬಂದಳು. ಚಿಪ್ಪಿಗೆ ಕಳ್ಳನ್ನು ಬಗ್ಗಿಸಿ ಬಗ್ಗಿಸಿ ಹೊಯ್ದು ಎಂಕಮುಗೆ ಕುಡಿಯಲಿಕ್ಕೆ ಕೊಟ್ಟಳು. ಎಂಕಮು ಕುಡಿದು ಉಲ್ಲಸಿತಳಾಗಿ ತನ್ನ ಮನೆಗೆ